5) ಸವದತ್ತಿ ತಾಲ್ಲೂಕಿನ ಮುರುಗೋಡಿನಲ್ಲಿ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವನ್ನು ಕಟ್ಟಲು ಆಗ್ರಹ

ಶ್ರೀ ಶಿವಾನಂದ್ ಹೆಜ್. ಕೌಜಲಗಿ (ಬೈಲಹೊಂಗಲ).— ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಪೈಕಿ ''ಮುರಗೆಂಡ'' ಗ್ರಾಮದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್ ಕಟ್ಟಡದ ಅವಶ್ಯಕತೆ ಬಹಳ ಇರುತ್ತದೆ. ಈ ಬಗ್ಗೆ ಜನರಿಂದ ಬೇಡಿಕೆ ಇರುತ್ತದೆ. ಆದಕಾರಣ ಅಲ್ಲಿ ಸ್ವಾಧೀನಪಡಿಸಿಕೊಂಡಿರುವ ಸ್ಥಳ ಸಣ್ಣದು ಇರುವುದರಿಂದ ಬೇರೆ ಸ್ಥಳವನ್ನು ಉಪಯೋಗಿಸಿಕೊಂಡು ಕೆ.ಎಸ್ ಆರ್.ಟಿ.ಸಿ. ಬಸ್‌ಸ್ಟ್ಯಾಂಡನ್ನು ಕಟ್ಟಲು ಕ್ರಮ ಕೈಗೊಳ್ಳಬೇಕು ಎಂದು ಮಾನ್ಯ ಸಾರಿಗೆ ಸಚಿವರ ಗಮನವನ್ನು ತಮ್ಮ ಮುಖಾಂತರ ಸೆಳೆಯಬಯಸುತ್ತೇನೆ.

SRI S. M. YAHYA (Hon. Minister for Industries Energy and Wakfs).—On behalf of the Minister for Transport I beg to make the following Statement.

Construction of bus station at Murugod in Soundatti Tq; Belgaum District was included in the Budget of 88-89 at an estimated cost of Rs. 6.00 lakhs. Tenders were also invited duly according approval to the estimate. Tenders were also approved and communicated to the Executive Engineer, Hubli on 16-11-88, and agreement was al-o concluded during November 88 by the contractor

But the Executive Engineer, Hubli informed on 27-9-89 that the land required for construction of Bus station at Murugod was not in possession and the Divisional Controller, Belgaum had also intimated that there is no possibility of acquiring of land in the near future. The Executive Engineer, Hubli had sought approval of the Central Office for the refund of E.M D when the Contractor requested for the same.

This subject was placed before the tender committee on 25-10-89 and after obtaining approval, the Executive. Engineer Hubli was informed on 3-11-89 to refund the E.M D.

Action will be taken for construction of bus station immedia tely soon after the land is acquired.

ಶ್ರೀ ಕೆ. ಬಿ. ಕೋಳಿವಾಡ (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಶ್ರೀ ಆರ್. ದಯಾನಂದ ರಾವ್ (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಶ್ರೀ ಬಸವರಾಜ್ (ಬಹ್ಮಾವರ).—ಮಾನ್ಯ ಅಧ್ಯಕ್ಷರೆ ಹಿಂದುಳಿದ ಜಾತಿಯಲ್ಲಿ ನಾಯಿರಿ ಜಾತಿಯವರನ್ನು ಸೇರಿಸುವ ಬಗ್ಗೆ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಬಸವರಾಜ್.—ಇಲ್ಲಿ ಸಂಬಂಧಪಟ್ಟ ಮಂತ್ರಿಗಳೇ ಇಲ್ಲ. ಈ ಬಗ್ಗೆ ಸರ್ಕಾರದ ಉತ್ತರ ಏನು? ಈ ವರದಿಯಲ್ಲಿ ಜಾತಿ ಹೆಸರು ಬಿಟ್ಟುಹೋಗಿದೆ. ಇದರ ಬಗ್ಗೆ ಸರ್ಕಾರ ಉತ್ತರ ಹೇಳಬೇಕು

ಶ್ರೀ ಎಸ್. ಎಂ. ಯಾಹ್ಯಾ.—ಸರ್ಕಾರದ ಗಮನವನ್ನು ತಾವು ಸೆಳೆದಿದ್ದೀರಿ. ನಾನು ಸಂಬಂಧ ಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಗಮನ ಸೆಳೆಯುವ ಸೂಚನೆ ಇದೆ.

ಅಧ್ಯಕ್ಷರು.—ಒಂದನ್ನು ವಿತ್ ಹೆಲ್ಡ್ ಮಾಡಿದ್ದೇನೆ. ಇನ್ನೊಂದನ್ನು ಸಮಯ ಕೇಳಿದ ರಿಂದ ಮುಂದಕ್ಕೆ ಹಾಕಿದ್ದೇನೆ.